ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

ಸಿ.ಸಿ. ನಂಃ 967/2022

| | | |
|---|---|---|
| ಸಾಕ್ಷಿದಾರರ ಹೆಸರುಃ | ಸಿಕಂದರ್ ಬಾಷಾ | ಪ್ರಮಾಣ ವಚನ ಭೋದಿಸಿದ ದಿನಾಂಕಃ 09-02-2023 |
| ತಂದೆಯ/ಗಂಡನ ಹೆಸರುಃ | ಖಾದರ್ | ಸಿ.ಡಬ್ಲ್ಯೂಃ4 |
| ವಯಸ್ಸುಃ | 29 ವರ್ಷ | ಪಿ.ಡಬ್ಲ್ಯೂಃ2 |
| ಉದ್ಯೋಗಃ | ಪಂಚರ್ ಶಾಪ್ | |
| ವಾಸಸ್ಥಳಃ | ಚಿಕ್ಕಜಾಜೂರು ಕ್ರಾಸ್ ಹೊಳಲ್ಕೆರೆ . | |

## ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ

ಚಾಸಾ-1 ನನ್ನ ಪತ್ನಿಯಾಗಬೇಕು, ನಾನು ಮೆಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು ನ್ಯಾಯಾಲಯದ ಮುಂದಿರುವ ಆರೋಪಿತರೆಲ್ಲಾ ನಮ್ಮ ಕುಟುಂಬದವರೇ ನಮ್ಮ ನಡುವೆ ಇದ್ದ ಯಾವುದೋ ವಿಷಯದ ಸಂಬಂದ ಇದ್ದ ಮನಸ್ತಾಪ ಸರಿಪಡಿಸಿಕೊಂಡಿದ್ದೇವೆ ನಾವೆಲ್ಲಾ ಈಗ ಒಟ್ಟಿಗೆ ಇದ್ದೇವೆ ನಮ್ಮ ನಡುವೆ ಯಾವುದೇ ಜಗಳ ಆಗಿಲ್ಲ . ಯಾವುದೇ ಆರೋಪಿತರು ಅಕ್ರಮ ಕೂಟ ರಚಿಸಿಕೊಂಡು ಬಂದಿಲ್ಲ. ಮತ್ತು ಬೈದಿಲ್ಲ ಹಲ್ಲೆ ಮಾಡಿಲ್ಲ. ಮಾನಕ್ಕೆ ಚ್ಯುತಿ ಯಾಗುವಂತೆ ಯಾವುದೇ ಆರೋಪಿ ನಡೆದುಕೊಂಡಿಲ್ಲ. ಜೀವ ಬೆದರಿಕೆ ಹಾಕಿಲ್ಲ.

ನಾನು ಯಾವುದೇ ಹೇಳಿಕೆಯನ್ನು ಪೊಲೀಸರಿಗೆ ನೀಡಿಲ್ಲ. ನಾನು ಯಾವ ವಿಚಾರಕ್ಕೆ ಚಿಕಿತ್ಸೆ ಪಡೆದೆ ನೆನಪಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

## ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ

04.03.2022 ರಾತ್ರಿ 9.10 ರ ಸಮಯದಲ್ಲಿ ನಾನು ಮತ್ತು ನನ್ನ ಪತ್ನಿ ಮನೆಯಲ್ಲಿರುವಾಗ ಚಾಸಾ-1 ರವರನ್ನು ಉದ್ದೇಶಿಸಿ ಮನೆ ಕ್ಲಿನಾಗಿಲ್ಲ ಎಂದು ಜೋರಾಗಿ ಮಾತಾಡುತಿದ್ದೆ ಎಂದರೆ ಸರಿಯಲ್ಲ. ಆಗ ನಾವು ಬೊಗ್ಯ ಹಾಕಿಸಿಕೊಂಡು ದಸ್ತಗಿರಿ ಎಂಬುವವರ ಮನೆಯಲ್ಲಿ ವಾಸವಾಗಿದ್ದು 1ನೇ ಆರೋಪಿಯು ಈ ಬಗ್ಗೆ ಪ್ರಶ್ನಿಸಿದರು ಎಂದರೆ ಸರಿಯಲ್ಲ.

ನನ್ನ ಪತ್ನಿ ಚಾಸಾ-1ರವರು 1ನೇ ಆರೋಪಿಯವರ ಬಳಿ ನಾನು ಆಕೆಯನ್ನು ಬೈದಿದ್ದಾಗಿ ಎಂದು ಹೇಳಿದರು ಎಂದರೆ ಸರಿಯಲ್ಲ. ಮನೆ ಮಾಲೀಕ ದಸ್ತಗಿರಿ ಯವರ ಮನೆಗೆ

ಬಂದಿದ್ದ ನಮ್ಮ ಸಂಬಂದಿಕರು ಅಂದರೆ ಎಲ್ಲಾ ಆರೋಪಿತರು ನನ್ನನ್ನು ಉದ್ದೇಶಿಸಿ ಜಗಳ ತೆಗೆದರು ಎಂದರೆ ಸರಿಯಲ್ಲ. ಹಾಗೂ ಎಲ್ಲರೂ ಸೇರಿ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಿಡಿಸಲು ಬಂದ ಚಾಸಾ-1 ರವರಿಗೆ ಎದೆಗೆ ಹೊಟ್ಟೆಗೆ ಬೆನ್ನಿಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-6 ಬಂದು ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ಮತ್ತು ಅವರೆಲ್ಲಾ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳನ್ನು ನಾನು ಹೇಳಿ ನಿಪಿ-1 ರಲ್ಲಿ ಚಾಸಾ-1 ನನ್ನ ಪತ್ನಿ ಹೇಳಿ ಬರೆಸಿದ್ದಾರೆ ಅದರ ಆದಾರದ ಮೇಲೆ ಪ್ರಕರಣ ದಾಖಲಾಗಿದೆ ಎಂದರೆ ಗೊತ್ತಿಲ್ಲ.

ಈಗ ಓದಿ ತೋರಿಸಿದ 05.03.2022 ರ ಹೇಳಿಕೆಯಲ್ಲಿ ಗಲಾಟೆಯ ಎಲ್ಲಾ ಸಂಗತಿಗಳನ್ನು ಪೊಲೀಸರಿಗೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ಓದಿ ತೋರಿಸಲಾಗಿ ಅಲ್ಲಗಳೆದಿದ್ದು ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

ನಾವು ಮತ್ತು ಆರೋಪಿತರು ಒಂದೇ ಕುಟುಂಬದವರಾದ್ದರಿಂದ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ . ನಾವು ಮತ್ತು ಆರೋಪಿತರೆಲ್ಲಾ ಒಂದೇ ಕುಟುಂಬದವರಾಗಿದ್ದು ರಾಜಿ ಮಾಡಿಕೊಂಡಿರುವ ಕಾರಣ ಶಿಕ್ಷೆ ಆಗಬಾರದು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿಃಇಲ್ಲ ಎಂದು ನುಡಿಯುತ್ತಾರೆ .**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ತಕ್ಕಂತ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

ಸಿ.ಸಿ. ನಂಃ 967/2022

| | | |
|---|---|---|
| ಸಾಕ್ಷಿದಾರರ ಹೆಸರುಃ | ಆಯೆಶಾ | ಪ್ರಮಾಣ ವಚನ ಭೋದಿಸಿದ ದಿನಾಂಕಃ |
| | | 09-02-2023 |
| ತಂದೆಯ/ಗಂಡನ ಹೆಸರುಃ | ಸಿಕಂದರ್ | ಸಿ.ಡಬ್ಲ್ಯೂಃ1 |
| ವಯಸ್ಸುಃ | 28 ವರ್ಷ | ಪಿ.ಡಬ್ಲ್ಯೂಃ1 |
| ಉದ್ಯೋಗಃ | ಗೋಲ್ಡ ಲೋನ್ ಪೈನಾನ್ಸ ಕಂಪನಿ ಮ್ಯಾನೇಜರ್ | |
| ವಾಸಸ್ಥಳಃ | ಹೊಳಲ್ಕೆರೆ . | |

**<u>ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ</u>**

ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು ನ್ಯಾಯಾಲಯದ ಮುಂದಿರುವ ಆರೋಪಿತರೆಲ್ಲಾ ನಮ್ಮ ಕುಟುಂಬದವರೇ ನಮ್ಮ ನಡುವೆ ಇದ್ದ ಯಾವುದೋ ವಿಷಯದ ಸಂಬಂದ ಇದ್ದ ಮನಸ್ತಾಪ ಸರಿಪಡಿಸಿಕೊಂಡಿದ್ದೇವೆ ನಾವೆಲ್ಲಾ ಈಗ ಒಟ್ಟಿಗೆ ಇದ್ದೇವೆ ನಮ್ಮ ನಡುವೆ ಯಾವುದೇ ಜಗಳ ಆಗಿಲ್ಲ . ಯಾವುದೇ ಆರೋಪಿತರು ಅಕ್ರಮ ಕೂಟ ರಚಿಸಿಕೊಂಡು ಬಂದಿಲ್ಲ ಮತ್ತು ಬೈದಿಲ್ಲ ಹಲ್ಲೆ ಮಾಡಿಲ್ಲ. ಮಾನಕ್ಕೆ ಚ್ಯುತಿ ಯಾಗುವಂತೆ ಯಾವುದೇ ಆರೋಪಿ ನಡೆದುಕೊಂಡಿಲ್ಲ. ಜೀವ ಬೆದರಿಕೆ ಹಾಕಿಲ್ಲ.

ಈಗ ನನಗೆ ತೋರಿಸಿದ 04.03.2022ರ ಪಿರ್ಯಾದಿನ ಕಂಡ ವಿಚಾರ ನಾನು ಹೇಳಿ ಬರೆಸಿಲ್ಲ. ಅದನ್ನು ಪೊಲೀಸರು ಬರೆದುಕೊಂಡಿದ್ದಾರೆ ಆದ್ದರಿಂದ ಏನು ಬರೆದಿದ್ದಾರೆ ಗೊತ್ತಿಲ್ಲ. ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ನಾನು ಯಾವುದೇ ದೂರು ನೀಡಿಲ್ಲ. ಮತ್ತು ಯಾವುದೇ ಮರು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ನಾವು ಮತ್ತು ಆರೋಪಿತರು ಒಂದೇ ಕುಟುಂಬದವರಾದ್ದರಿಂದ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ .

04.03.2022 ರಾತ್ರಿ 9.10 ರ ಸಮಯದಲ್ಲಿ ನಾನು ಮತ್ತು ಚಾಸಾ-4 ಮನೆಯಲ್ಲಿರುವಾಗ ಚಾಸಾ-4 ರವರು ಮನೆ ಕ್ಲಿನಾಗಿಲ್ಲ ಎಂದು ಜೋರಾಗಿ ಮಾತಾಡುತಿದ್ದರು ಎಂದರೆ ಸರಿಯಲ್ಲ. ಆಗ ನಾವು ಬೋಗ್ಯ ಹಾಕಿಸಿಕೊಂಡು ದಸ್ತಗಿರಿ ಎಂಬುವವರ ಮನೆಯಲ್ಲಿ ವಾಸವಾಗಿದ್ದು 1 ನೇ ಆರೋಪಿಯು ಈ ಬಗ್ಗೆ ಪ್ರಶ್ನಿಸಿದರು ಎಂದರೆ ಸರಿಯಲ್ಲ. ಚಾಸಾ-4 ನನ್ನನ್ನು ಉದ್ದೇಶಿಸಿ ಬೈಯ್ಯುತಿದ್ದಾರೆ ಎಂದು ಹೇಳಿದೆ ಎಂದರೆ ಸರಿಯಲ್ಲ. ಮನೆ ಮಾಲೀಕ ದಸ್ತಗಿರಿ ಯವರ ಮನೆಗೆ ಬಂದಿದ್ದ ನಮ್ಮ ಸಂಬಂದಿಕರು ಅಂದರೆ ಎಲ್ಲಾ ಆರೋಪಿತರು ಚಾಸಾ-4 ನನ್ನನ್ನು ಉದ್ದೇಶಿಸಿ ಜಗಳ ತೆಗೆದರು ಎಂದರೆ ಸರಿಯಲ್ಲ. ಹಾಗೂ ಎಲ್ಲರೂ ಸೇರಿ ಅವರ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಿಡಿಸಲು ಬಂದ ನನಗೆ ಎದೆಗೆ ಹೊಟ್ಟೆಗೆ ಬೆನ್ನಿಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-6 ಬಂದು ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ಮತ್ತು ಅವರೆಲ್ಲಾ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳನ್ನು ನಾನು ಹೇಳಿ ನಿಪಿ-1 ರಲ್ಲಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

ಈಗ ಓದಿ ತೋರಿಸಿದ 05.03.2022 ರ ಮರು ಹೇಳಿಕೆಯಲ್ಲಿ ಗಲಾಟೆಯ ಸಮಯ 9.10 ರ ಬದಲಾಗಿ 9.30 ಎಂದು ನೀಡಿದ್ದಾಗಿ ಮರು ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ಓದಿ ತೋರಿಸಲಾಗಿ ಅಲ್ಲಗಳೆದಿದ್ದು ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

ನಾವು ಮತ್ತು ಆರೋಪಿತರೆಲ್ಲಾ ಒಂದೇ ಕುಟುಂಬದವರಾಗಿದ್ದು ರಾಜಿ ಮಾಡಿಕೊಂಡಿರುವ ಕಾರಣ ಶಿಕ್ಷೆ ಆಗಬಾರದು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿಃಇಲ್ಲ ಎಂದು ನುಡಿಯುತ್ತಾರೆ .**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ತಕ್ಕಂತ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.